
ಕೊಡಿಸದಿದ್ದರೆ ನಾಳೆ ನಿಮ್ಮ ಬೆಳಗಿನ ತಿಂಡಿಗೆ ದೋಸೆ ಮಾಡುವುದಿಲ್ಲ. ನಿಮಗೆ ಸಿಮೆಂಟ್ ಕಾಂಕ್ರೀಟಿನಂಥ ಉಪ್ಪಿಟ್ಟೇ ಗತಿ ಎಂದು ನನ್ನಾಕೆ ಧಮ್ಕಿ ಹಾಕಿದ್ದಿದೆ. ನಮ್ಮಲ್ಲಿ ಎಷ್ಟೋ ಮಂದಿಯ ನರನಾಡಿಗಳಲ್ಲಿ ರಕ್ತದ ಜೊತೆಗೆ ದೋಸೆಯ ಪ್ರೀತಿಯೂ ನಿರಂತರವಾಗಿ ಹರಿಯುತ್ತಲೇ ಇರುವುದನ್ನು ಗಮನಿಸಬಹುದು.

ದೋಸೆ ಆಹಾರವಾಗಿರಬಹುದು ಆದರೆ ಆಹಾರವನ್ನು ಮೀರಿ ಈಗ ವ್ಯವಹಾರವಾಗಿದೆ. ಪೇಟೆ ಪಟ್ಟಣಗಳಲ್ಲಿ ದೋಸೆ ಮನೆ, ದೋಸೆ ಕ್ಯಾಂಪ್, ದೋಸೆ ದುಖಾನ್, ಹಳ್ಳಿ ದೋಸೆ, ದೋಸೆ ದರ್ಬಾರ್, ದೋಸೆ ಖಜಾನಾ ಮುಂತಾದ ಹೆಸರಿನ ಅನೇಕ ಹೋಟೆಲುಗಳು ತಲೆಯೆತ್ತಿ, ದೋಸೆಯಿಂದಲೇ ಲಕ್ಷಾಂತರ ರೂಪಾಯಿ ವ್ಯವಹಾರ ವಹಿವಾಟು ನಡೆಸುತ್ತಿವೆ. ಪ್ರತಿನಿತ್ಯ ನಮ್ಮಲ್ಲಿಯ ಹೋಟೆಲುಗಳಲ್ಲಿ ಮಾರಾಟವಾಗುವ ದೋಸೆಗಳನ್ನು ಲೆಕ್ಕವಿಟ್ಟರೆ ಅವು ಲಕ್ಷ ಲಕ್ಷ ದಾಟಬಹುದು.

ಈ ರೀತಿ ಅನೇಕರ ಬದುಕಿನ ನಿರ್ವಹಣೆಗೆ ದೋಸೆಯೇ ದಾರಿದೀಪವೂ ಆಗಿ ಒದಗಿ ಬಂದು, ಅವರ ಪಾಲಿಗೆ ದೋಸೆಯೇ ದೇಗುಲವಾಗಿರುವುದಂತೂ ವಾಸ್ತವ. ಹೀಗೆ ದೋಸೆ ಮೇಲೆ ದೋಷವಿಲ್ಲದೇ ವ್ಯಾಪಾರ ಮಾಡಿ ಲಕ್ಷಾಧೀಶರಾದ ಹೋಟೆಲ್ ಮಾಲೀಕರು ನಮ್ಮಲ್ಲಿ ಬೇಕಾದಷ್ಟು ಇದ್ದಾರೆ. ಆಗಾಗ ಪಂಚತಾರಾ ಹೋಟೆಲಿಗೆ ಹೋಗಿ ಬಾಯಿ ಚಪಲದಿಂದ ದೋಸೆ ತಿಂದು ದೌಲತ್ತು ಪ್ರದರ್ಶಿಸುವ ಚಪಲ ಬೆಳೆಸಿಕೊಂಡ ದೋಸಾಮಣಿಯರನ್ನೂ ನಾನು ನೋಡಿದ್ದೇನೆ.



ಭಾರತ ಜಾತ್ಯತೀತ ರಾಷ್ಟ್ರ. ನನ್ನ ದೃಷ್ಟಿಯಲ್ಲಿ ದೋಸೆಯೂ ಜಾತ್ಯತೀತವೇ. ಕಾರಣ ಎಲ್ಲ ಜಾತಿ, ವರ್ಗ, ಧರ್ಮದವರೂ ದೋಸೆ ಎಂದರೆ ಬಾಯಿಬಾಯಿ ಬಿಡುತ್ತಾರೆಯೇ ಹೊರತು ದೋಸೆಯಲ್ಲಿ ಯಾರೂ ಅಸೂಯೆ ಹುಡುಕುವುದಿಲ್ಲ. ಹೀಗಾಗಿ ದೋಸೆಯಿಂದ ದೋಸ್ತರಾಗುತ್ತಾರೆಯೇ ವಿನಾ ಯಾರು ದುಶ್ಮನ್ ಆದ ನಿದರ್ಶನವಿಲ್ಲ. ದೋಸೆಯನ್ನು ಸಸ್ಯಾಹಾರಿಗಳು ಮಾತ್ರ ತಿನ್ನುತ್ತಾರೆಂದಲ್ಲ. ಮಟನ್ ಕೈಮಾ, ಚಿಕನ್ ಕರಿ, ಮೀನು ಗಸಿ ಜೊತೆಗೂ ದೋಸೆ ತುಂಬಾ ರುಚಿ. ಕಾರಣ ದೋಸೆಗೆ ಸಮ್ಮಿಶ್ರ ಸರ್ಕಾರದಂತೆ ಎಲ್ಲವುಗಳೊಂದಿಗೆ ಹೊಂದಿಕೊಳ್ಳುವ ಗುಣ ಹೆಚ್ಚಿರುವುದರಿಂದ ಮಾಂಸಾಹಾರಿಗಳಿಗೂ ಇದು ಆಪ್ತ ಬಾಂಧವ.

ಹೀಗೆ ದೋಸೆ ಎಲ್ಲೆಡೆಯೂ ಏಕತೆಯ ಸಂಕೇತವಾಗಿಯೂ ಆಕರ್ಷಿಸುತ್ತದೆ. ಚಟ್ನಿ, ಸಾಂಬಾರ್, ಆಲೂಗೆಡ್ಡೆ ಪಲ್ಯ, ಜಾಮ್ ಇಂಥ ಯಾವುದೇ ಪಕ್ಕಖಾದ್ಯಗಳಿದ್ದರೂ (ಪಕ್ಕವಾದ್ಯವಲ್ಲ) ದೋಸೆಯ ಲಾಸ್ಯ ಸಾಂಗವಾಗಿಯೇ ನಡೆಯುತ್ತದೆ.

ದೋಸೆ ಎಂದರೆ ಹಲವರ ಬಾಯಲ್ಲಿ ಕಡು ಬರಗಾಲದಲ್ಲೂ ನೀರೂರುವುದು ಖಚಿತ, ಆದ್ದರಿಂದ ದೋಸೆ ಜನಪ್ರಿಯತೆ ಬಗ್ಗೆ ದೂಸ್ರಾ ಮಾತೇ ಇಲ್ಲ. ಭರತ ಖಂಡದಲ್ಲಂತೂ ಈಗ ಮನೆಮನೆ ಮನಮನಗಳಲ್ಲೂ ಈ ದೋಸೆ ಅಖಂಡವಾಗಿರುವುದರಿಂದ, ಈ ದೋಸೆ ಯಾವತ್ತೂ ಸಾವಿಲ್ಲದ ಚಿರಂಜೀವಿಯೇ.

ಇನ್ನು ವೈವಿಧ್ಯತೆಯಲ್ಲೂ ದೋಸೆಯನ್ನು ಮೀರಿಸುವಂತಹ ಖಾದ್ಯವೇ ಇಲ್ಲ. ಅಕ್ಕಿ ದೋಸೆ, ನೀರು ದೋಸೆ, ರವಾ ದೋಸೆ, ರಾಗಿ ದೋಸೆ, ಮಿಲೆಟ್ ದೋಸೆ, ಖಾಲಿ ದೋಸೆ, ತುಪ್ಪದ ದೋಸೆ, ಬೆಣ್ಣೆ ದೋಸೆ, ಈರುಳ್ಳಿ ದೋಸೆ, ಸೆಟ್ ದೋಸೆ, ಮಸಾಲೆ ದೋಸೆ, ಗೋಧಿ ದೋಸೆ, ಗರಿಗರಿ ದೋಸೆ, ಮೆದು ದೋಸೆ, ಟೊಮೆಟೊ ದೋಸೆ, ಡ್ರೈಫ್ರೂಟ್ಸ್ ದೋಸೆ, ಹಲಸಿನ ಹಣ್ಣಿನ ದೋಸೆ, ಕಬ್ಬಿನ ಹಾಲಿನ ದೋಸೆ, ಬೆಲ್ಲದ ದೋಸೆ... ಹೀಗಿವೆ ದೋಸೆಯ ಬಹುರೂಪಗಳು.

ಶಿರಸಿ, ಸಿದ್ದಾಪುರ, ಯಲ್ಲಾಪುರ ಸೀಮೆಯಲ್ಲಂತೂ ಹಿಟ್ಟನ್ನು ತೆಳ್ಳಗೆ ಮಾಡಿ ಕಾವಲಿ ಮೇಲೆ ಸೃಷ್ಟಿಸುವ ಬೆಳ್ಳಿಗಿನ ದೋಸೆಗೆ ತೆಳ್ಳೇವು ಎನ್ನುತ್ತಾರೆ. ಈ ತೆಳ್ಳೇವಿಗೆ ಜೋನಿ ಬೆಲ್ಲವನ್ನೋ ಅಥವಾ ಜೇನುತುಪ್ಪವನ್ನೋ ಸೇರಿಸಿಕೊಂಡು ಬಾರಿಸಿದರೆ ಡಜನ್ ಡಜನ್ ಲೆಕ್ಕದಲ್ಲಿ ಹೊಟ್ಟೆಗೆ ಅವು ಸದ್ದಿಲ್ಲದೇ ಸೇರಿಕೊಳ್ಳುತ್ತವೆ. ಇವುಗಳ ಜೊತೆ ಎಮ್ಮೆ ತುಪ್ಪ ಸೇರಿದರಂತೂ ಆಗ ಅದು ಹೆಮ್ಮೆ ತುಪ್ಪವೇ. ಮನೆಯಲ್ಲಿ ಹೆಂಡತಿಯಿಂದ ಹೀಗೆ ನಿತ್ಯವೂ ದೋಸೆ ಭಾಗ್ಯ ಸಿಗುವಂತಾದರೆ ಅದು ಗಂಡಂದಿರ ಪಾಲಿಗೆ ಸ್ವರ್ಗ ಸುಖ.

ಆಲೆಮನೆಯ ಕಾಲದಲ್ಲಂತೂ ಕಬ್ಬಿನ ಹಾಲನ್ನು ಹಿಟ್ಟಿಗೆ ಕಲಸಿ ಮಾಡುವ ತೆಳುವಾದ ದೋಸೆಗೆ ತೊಡೆದೇವು ಎನ್ನುತ್ತಾರೆ. ಈ ತೊಡೆದೇವು ತೊಡೆಬಾವಿಗೂ ದಿವ್ಯ ಔಷಧಿಯೆನ್ನುತ್ತಾರೆ ಕುಹಕಿಗಳು. ಕರಾವಳಿಯ ಕೊಂಕಣಿ ಬಾಂಧವರು ಮೀನನ್ನು ಎಷ್ಟು ಇಷ್ಟಪಡುತ್ತಾರೋ, ಹಾಗೆಯೇ ಮಲೆನಾಡಿನ ಹವ್ಯಕರು ತೊಡೆದೇವೆಂದರೆ ಮನೆದೇವರಂತೆ ಪ್ರೀತಿಪಡುತ್ತಾರೆ.

ದಾವಣಗೆರೆ ಬೆಣ್ಣೆ ದೋಸೆ ಸಿಗುತ್ತದೆ ಎಂದು ಬೋರ್ಡ್ ಹಾಕಿಕೊಂಡಿರುವ ಹೋಟೆಲುಗಳು ಈಗ ಕೇವಲ ದಾವಣಗೆರೆಯೊಂದೇ ಅಲ್ಲ, ಬೆಂಗಳೂರು, ಮೈಸೂರು ಅಷ್ಟೇ ಏಕೆ ನೇಪಾಳದಲ್ಲೂ ಇವೆ ಎಂದರೆ ಈ ದೋಸೆಯಿಂದಾಗಿಯೇ ದಾವಣಗೆರೆಗೆ ಹೇಗೆ ಜಗತ್ಪ್ರಸಿದ್ಧಿ ಸಿಗುವಂತಾಗಿದೆ ಎಂಬುದನ್ನು ನಾವು ಅರ್ಥೈಸಿಕೊಳ್ಳಬಹುದು.

ನಾನು ಇಂಗ್ಲೆಂಡ್, ಜಪಾನ್, ರಷ್ಯಾ ಮುಂತಾದ ಅನೇಕ ದೇಶಗಳಿಗೆ ಹೋದಾಗ ಭಾರತೀಯ ಊಟೋಪಚಾರದ ಹೋಟೇಲುಗಳನ್ನು ಹುಡುಕಿಕೊಂಡು ಹೋಗುತ್ತಿದ್ದೆ. ಇದಕ್ಕೆ ಕಾರಣ ನನ್ನಲ್ಲಿರುವ ದೋಸೆಯ ಆಸೆ. ಹುಟ್ಟು ಗುಣ ಘಟ್ಟ ಹತ್ತಿದರೂ ಹೋಗುವುದಿಲ್ಲ ಎನ್ನುತ್ತಾರೆ. ಹಾಗೆಯೇ ದೋಸೆ ನನ್ನ ಹುಟ್ಟು ಗುಣವಾಗಿರುವುದರಿಂದ ವಿದೇಶಗಳಿಗೆ ಹೋದಾಕ್ಷಣ ಅದನ್ನು ಮರೆಯುವುದುಂಟೇ?

ನನ್ನ ಸ್ನೇಹಿತರ ಪೈಕಿ ಕೆಲವರು ತಾನು ವಿರಾಟ್ ಕೊಹ್ಲಿಯ ಫ್ಯಾನು, ಶಿಲ್ಪಾ ಶೆಟ್ಟಿಯ ಫ್ಯಾನು, ಮೋದಿಯ ಫ್ಯಾನು ಎಂದೆಲ್ಲಾ ಹೇಳಿಕೊಳ್ಳುವವರಿದ್ದಾರೆ. ಆದರೆ ನಾನಂತೂ ದೋಸೆಯ ಫ್ಯಾನ್ ಆಗಿರುವುದಂತೂ ಹೌದು. ಬೇಕಿದ್ದರೆ ನೀವು ದೋಸೆ ಮ್ಯಾನ್ ಎಂದು ಕರೆದರೂ ನನ್ನ ತಕರಾರೇನಿಲ್ಲ. ನಮ್ಮ ದೇಶದಲ್ಲಂತೂ ಹಾದಿಬೀದಿ ಬದಿಯಲ್ಲಿ ನಾಲ್ಕು ಗಾಲಿಗಳ ಸೈಕಲ್, ತಳ್ಳು ಗಾಡಿಗಳ ಮೇಲೆಯೂ ದೋಸೆ ಮಾಡಿ ತಮ್ಮ ಬದುಕಿನ ಬಂಡಿ ಸಾಗಿಸುವ ಎಷ್ಟೋ ಶ್ರಮಜೀವಿಗಳು ಎಲ್ಲಾ ಪೇಟೆ ಪಟ್ಟಣಗಳಲ್ಲಿ ನೋಡಸಿಗುತ್ತಾರೆ. ಹೀಗೆ ಸರ್ವಾಂತರ್ಯಾಮಿಯಾದ ದೋಸೆಯ ಸಹವಾಸ ಮಾಡಿದವರು ಸಾಕಷ್ಟಿದ್ದರೂ ಅವರಾರಿಗೂ ಸಹವಾಸ ದೋಷ ಎಂಬ ಅಪಖ್ಯಾತಿ ಅಂಟಿಲ್ಲ. ಬೇಸಿಗೆಯ ಸೆಕೆಯಲ್ಲೂ ಫುಟ್‌ಪಾತುಗಳ ಮೇಲೆ ಸಖಿಯೊಂದಿಗೆ ಸುಖವಾಗಿ ನಿಂತು, ಸುಡುಸುಡು ಕಾವಲಿಯ ಮೇಲೆ ಬಿಸಿಬಿಸಿ ದೋಸೆಯನ್ನು ದೋಸೆ ವ್ಯಾಪಾರಿಗಳು ಬೆವರು ಸುರಿಸುತ್ತಾ ಎರೆದೆರೆದು ಹಾಕುವಾಗ ಸಹಜವಾಗಿಯೇ ದೋಸಾಭಿಮಾನಿಗಳಿಗೆ ಅದರ ರುಚಿ ಖುಷಿ ಇನ್ನೂ ಹೆಚ್ಚಲ್ಲವೇ.

ನಾನು ಚಿಕ್ಕವನಾಗಿರುವಾಗಿನ ನೆನಪು. ಮಾರಿ ಜಾತ್ರೆಗೆ ಅಪ್ಪ ನಮ್ಮನ್ನೆಲ್ಲ ಕರೆದೊಯ್ದು, ದಿಲ್ದಾರಾಗಿ ಶಿರಸಿಯ ಸಾಮ್ರಾಟ ಹೋಟೆಲಿನಲ್ಲಿ ಭರ್ಜರಿ ಮಸಾಲೆ ದೋಸೆ ಪಾರ್ಟಿ ಕೊಡಿಸಿ ದಿಲ್ ಖುಷ್ ಮಾಡುತ್ತಿದ್ದ. ಮಾರಿ ಜಾತ್ರೆಗೆ ಹೋಗಿ ಮಾರಿಕಾಂಬಾ ದೇವಿಯ ದರ್ಶನ ಮಾಡುತ್ತಿದ್ದಕ್ಕಿಂತ ಹೆಚ್ಚಿನ ಖುಷಿ ಸಾಮ್ರಾಟ ಹೋಟೆಲಿನ ಆ ಮಸಾಲೆ ದೋಸೆಯ ದರ್ಶನದಲ್ಲಿ ಸಿಗುತ್ತಿದ್ದುದು ನಿಜ.

ಅತಿಥಿ ಸತ್ಕಾರದಲ್ಲಂತೂ ದೋಸೆಯದ್ದೇ ಸದಾ ಮೇಲುಗೈ. ಮನಸ್ಸಿದ್ದರೆ ಮಾರ್ಗ ಎನ್ನುತ್ತಾರೆ. ಹಾಗೆಯೇ ದೋಸೆಯನ್ನು ಲವ್ ಮಾಡುವವರಿಗೆ ದೋಸೆ ಇರುವೆಡೆಯೇ ಮಾರ್ಗ. ದೋಸೆಯೇ ಅವರಿಗೆ ದಾರಿದೀಪ. ಮಕ್ಕಳಿರಲವ್ವ ಮನೆ ತುಂಬಾ ಎನ್ನುತ್ತಾರೆ. ಈ ಮಕ್ಕಳಿಗೆ ದೋಸೆಯೂ ಇರಲವ್ವ ಹೊಟ್ಟೆ ತುಂಬಾ... ಎಂಬುದು ದೋಸೆಯ ದೋಸ್ತನಾದ ನನ್ನ ಹಾರೈಕೆ.

ರುಚಿ ಎಂಬುದು ದೋಸೆಗೆ ಜನ್ಮಜಾತವಾಗಿ ಬಂದಿರುವುದರಿಂದ ದೋಸೆಗಾಗಿ ಯಾರಾದರೂ ಆಸೆ ಅಥವಾ ದುರಾಸೆ ಪಟ್ಟರೆ ಅದು ತಪ್ಪೇನಲ್ಲ. ಹೀಗೆ ಸರ್ವಪ್ರಿಯವಾದ ದೋಸೆಯನ್ನೇ ಚುನಾವಣೆಯಲ್ಲಿ ಚಿಹ್ನೆ ಮಾಡಿಕೊಂಡು ನಿಂತರೆ ಬಹುಮತದಿಂದ ಆಯ್ಕೆಯಾಗುವ ಸುಯೋಗವೂ ಬರಬಹುದು. ಹೇಳುತ್ತಾ ಹೋದರೆ ದೋಸೆಯ ಮಹಿಮೆಯನ್ನು ಹರಿಕಥೆಯಂತೆ ವರ್ಣಿಸಬಹುದು.

ದೋಸೆಗೆ ಇಷ್ಟೆಲ್ಲಾ ಮಹತ್ವವಿರುವಾಗಲೂ, ಎಲ್ಲರ ಮನೆಯ ದೋಸೆ ತೂತು ಎಂದು ದೋಸೆಯನ್ನು ಕೆಲವರು ಟೀಕಿಸುವುದನ್ನು ಗಮನಿಸಿದಾಗ ಆ ಟೀಕಾಕಾರರ ಬುದ್ಧಿಗೇ ದೊಡ್ಡ ತೂತು ಬಿದ್ದಿರಬಹುದು ಎಂದು ನನ್ನಂಥ ದೋಸೆ ಪ್ರಿಯರಿಗೆ ಅನ್ನಿಸುವುದು